## 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸೇಶನ ಕೇಸ ನಂಃ 155/2020

ಪಿಡಬ್ಲು : 1 ಸಿಡಬ್ಲು : 9

ಸಾಕ್ಷಿಯ ಹೆಸರು : ಶ್ರೀ. ರುದ್ರಪ್ಪ ತಾಯಿ–ಯಮನವ್ವ ದೊಡಮನಿ

ತಾಯಿಯ ಹೆಸರು : ಯಮನವ್ವ ದೊಡಮನಿ

ವಯಸ್ಸು : 59 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ್ತವ್ಯ : ಬಸರಕೋಡ

ದಿನಾಂಕ : 15.03.2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ನನ್ನ ಸೊಸೆ. ಚಾಸಾಃ 8 ನನ್ನ ಸೊಸೆಯ ಅಣ್ಣ. ಚಾಸಾಃ 10 ನನ್ನ ಹೆಂಡತಿ. ಚಾಸಾಃ 11 ನನ್ನ ತಮ್ಮ, ಚಾಸಾಃ 12 ನನ್ನ ತಮ್ಮನ ಮಗ. ಚಾಸಾಃ 13 ನನ್ನ ಮಗ. ಚಾಸಾಃ 14 ನನ್ನ ಅಣ್ಣನ ಮಗ. ಚಾಸಾಃ20 ಮತ್ತು ಚಾಸಾಃ21 ಸಂಬಂಧಿಕರು. ಚಾಸಾಃ 15 ರಿಂದ ಚಾಸಾಃ19 ಪರಿಚಯ. ಸದರಿಯವರು ನಮ್ಮ ಊರಿನವರಾಗಿರುತ್ತಾರೆ. ನನಗೆ ಇಬ್ಬರು ಮಕ್ಕಳು ಅದರಲ್ಲಿ ಮೃತಪಟ್ಟ ಬಸವರಾಜ ದೊಡ್ಡ ಮಗ, ಚಾಸಾಃ 13 ಸಣ್ಣ ಮಗ. ನಮ್ಮದು ಹಿಂದೂ ಮಾದರ ಜಾತಿಯಾಗಿರುತ್ತದೆ. ಈ ಪ್ರಕರಣದ 1 ರಿಂದ 3ನೇ ಆರೋಪಿತರು ಪರಿಚಯ. ಸದರಿಯವರು ನಮ್ಮ ಓಣಿಯವರು. ಆರೋಪಿತರು ಹಿಂದೂ ಮರಾಠಾ ಜಾತಿಯವರಾಗಿರುತ್ತಾರೆ.

2. ನನ್ನ ಮಗ ಮೃತ ಬಸವರಾಜ ಇತನು ದೇವಗಾಂವ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದನು. 2 ನೇ ಆರೋಪಿಯ ಹೆಂಡತಿಯೊಂದಿಗೆ ನನ್ನ ಮೃತ ಮಗನಾದ ಬಸವರಾಜ ಇವರ ಮಧ್ಯೆ ಏನು ಘಟನೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ 3ನೇ

ಆರೋಪಿಯೊಂದಿಗೆ ನನ್ನ ಮೃತ ಮಗ ಬಸವರಾಜ ಇತನ ಸಂಬಂಧ ಏನು ಇತ್ತು ಎಂದು ನನಗೆ ಗೊತ್ತಿಲ್ಲ. ಈಗ 4 ವರ್ಷಗಳ ಹಿಂದೆ ನನ್ನ ಮಗನಾದ ಬಸವರಾಜ ಇತನ ಕೊಲೆಯಾಗಿರುತ್ತದೆ. ಈಗ 4 ವರ್ಷಗಳ ಹಿಂದೆ ಒಂದು ದಿನ ನಮ್ಮ ಓಣಿಯಲ್ಲಿ ಹೊಸದಾಗಿ ಕರೆಮ್ಮ ದೇವಿಯ ದೇವಸ್ಥಾನವನ್ನು ಕಟ್ಟುತ್ತಿದ್ದು ಅದಕ್ಕೆ ನಾನು ನೀರು ಹೊಡೆಯಲು ಮುಂಜಾನೆ 10.00 ಗಂಟೆಗೆ ಹೋಗುತ್ತಿರುವಾಗ ದಾರಿ ಮಧ್ಯದಲ್ಲಿ ಕಿತ್ತೂರು ಪೋಲಿಸರು ನನ್ನ ಹತ್ತಿರ ಬಂದು ಬಸವರಾಜನ ಸಂಬಂಧಿಕರು ಯಾರು ಮತ್ತು ತಂದೆ ತಾಯಿ ಯಾರು ಎಂದು ನನ್ನನ್ನು ಕೇಳಿದ್ದು ಆಗ ನಾನು ಬಸವರಾಜನ ತಂದೆ ಆಗಿರುತ್ತೇನೆ ಅಂತಾ ಹೇಳಿದ್ದು ಆಗ ಅವರು ನನಗೆ ತಿಳಿಸಿದ್ದೇನೆಂದರೆ ನಿನ್ನ ಮಗನನ್ನು ಯಾರೋ ಗೋಪಾಲ ಪಾಗದರವರ ಮನೆಯ ಹಿತ್ತಲದಲ್ಲಿ ಹೊಡೆದು ಹಾಕಿರುತ್ತಾರೆ ಬಾ ಅಂತಾ ಹೇಳಿದ್ದು ಆಗ ನಾನು ಮನೆಗೆ ಹೋಗಿ ಸದರಿ ವಿಷಯವನ್ನು ನಮ್ಮ ಮನೆಯವರಿಗೆ ತಿಳಿಸಿ ನನ್ನ ಮಗ ಬಿದ್ದಂತಹ ಸ್ಥಳವನ್ನು ನೋಡಲು ನಾನು, ಚಾಸಾಃ11 ಮತ್ತು ಚಾಸಾಃ 12 ರವರು ಹೋಗಿ ಗೋಪಾಲ ಪಾಗಾದ ಇವರ ಮನೆಯ ಹಿತ್ತಲದಲ್ಲಿ ನೋಡಲಾಗಿ ಅಲ್ಲಿ ನನ್ನ ಮಗನಿಗೆ ಪೆಟ್ಟಾಗಿ ಬಿದ್ದಿದ್ದನು ಆತನ ಮೈಮೇಲೆ ಎಲ್ಲಾ ಕಾರದ ಪುಡಿ ಬಿದ್ದಿತ್ತು. ತಲೆಯ ಹಿಂಬದಿಗೆ ಮತ್ತು ಎರಡು ಕಾಲುಗಳ ಮೂಳೆಗಳು ತುಂಡಾಗಿದ್ದವು ಮತ್ತು ನನ್ನ ಮಗನ ತಲೆಯಿಂದ ರಕ್ತ ಸೋರಿತ್ತು. ನನ್ನ ಮಗನಿಗೆ ಪ್ರಜ್ಞೆ ಇರಲಿಲ್ಲ.

3. ಸದರಿ ಸ್ಥಳಕ್ಕೆ ಅಂಬ್ಯುಲೆನ್ಸ ಬಂದಿದ್ದು ಅದರಲ್ಲಿ ನನ್ನ ಮಗನನ್ನು ಚಿಕಿತ್ಸೆಗಾಗಿ ನನ್ನ ತಮ್ಮ ಮತ್ತು ನನ್ನ ತಮ್ಮನ ಮಗ ಕಿತ್ತೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನನ್ನನ್ನು ಪೋಲಿಸರು ತಮ್ಮ ಜೀಪಿನಲ್ಲಿ ಕಿತ್ತೂರು ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನ ಎರಡನೇ ಮಗ ಇತನಿಗೆ ಯಾರೋ ಪೋನ ಮಾಡಿ ತಿಳಿಸಿರುತ್ತಾರೆ.

**ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರವರು ಮುಂದುವರೆದ ಮುಖ್ಯ ವಿಚಾರಣೆ ಮಾಡಿಸಲು ಸಮಯಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.